1	2	3	4
7.	ಶ್ರೀ. ತಾಲು ನೀಲು ಲಮಾಣಿ	ಶಿವಣಗಿ	

3. ಗಿರಿಜನ ಉಪಯೋಜನೆ:- (ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹಧನ ಮತ್ತು ಪ್ಯಾಕೇಜ್ ಬೆನಿಫಿಟ್ಸ್)

1.	ಶ್ರೀ. ಎಂ. ಬಿ. ದಳವಾಯಿ	ಮಲಕದೇವರಹಟ್ಟಿ	ರೂ. 2,000-00	ಹಿಪ್ಪುನೇರಳೆಕಡ್ಡಿ ಬೆಲೆ ಬಾಬ್ತು ಹಾಗೂ ಗೊಬ್ಬರ
			ರೂ. 2,500-00	ಕೊಟ್ಟಿಗೆ ಗೊಬ್ಬರ ರಸ ಗೊಬ್ಬರ ಹಾಗೂ ಬಿದಿರಿನ ಚಂದ್ರಿಕೆ ಮತ್ತು ತಟ್ಟಿಗಳು.

4. ನೀರಾವರಿ ಬಾವಿ :-

1.	ಶ್ರೀಮತಿ. ಬೇಬಿ ಕೇಸು ಲಮಾಣಿ	ಆರಕೇರಿ ತಾಂಡಾ	ರೂ. 30,000-00	ಗರಿಷ್ಠ ಸಹಾಯಧನ

ವಿಷಯ:- ವಿಜಾಪುರ ನಗರದಲ್ಲಿ ಐ.ಡಿ.ಎಸ್.ಎಂ.ಟಿ. ಕಾರ್ಯಕ್ರಮ ಗಳು.

1358 (1756) ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರದಲ್ಲಿ ಐ.ಡಿ.ಎಸ್.ಎಂ.ಟಿ. ಅಭಿವೃದ್ಧಿ ಯೋಜನೆಯಲ್ಲಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳೇನು? ಯಾವ ಯಾವ ಪ್ರದೇಶಗಳಲ್ಲಿ ಹಾಕಿಕೊಳ್ಳಲಾಗಿದೆ, (ಸಂಪೂರ್ಣ ವಿವರ ನೀಡುವುದು)

ಆ) ಈ ಕಾರ್ಯಕ್ರಮದ ಅಡಿಯಲ್ಲಿ ಕೈಗೊಂಡ ಅಭಿವೃದ್ಧಿಗಳೇನು?

1) ಭೂಸ್ವಾಧೀನ ಮತ್ತು ಅದರ ಅಭಿವೃದ್ಧಿ

2) ಟ್ರಾಫಿಕ್ ಮತ್ತು ಸಾರಿಗೆ ಸಂಪರ್ಕ

3) ಅಂಗಡಿ ಮಳಿಗೆಗಳು

4) ಸುಲಭ್ ಶೌಚಾಲಯಗಳು

5) ಕೈಗಾರಿಕಾ ಮಳಿಗೆಗಳು

ಶ್ರೀ ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) 1) ಆರು ವಾಣಿಜ್ಯ ಮಳಿಗೆ ಸಂಕೀರ್ಣಗಳ ನಿರ್ಮಾಣ

i) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು. ತಾಲಬಾವದಿ ಏರಿಯಾದಲ್ಲಿ.

ii) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು, ಬಾಗಲ ಕೋಟೆ ರಸ್ತೆ ಹುಡ್ಕೋ ಹತ್ತಿರ.

iii) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು ವಾರ್ಡ್ ನಂ. 1 ಆದರ್ಶ ನಗರದಲ್ಲಿ (ಹೊಸ ಹುಡ್ಕೋ)

iv) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು ಸ್ಟೇಷನ್ ರಸ್ತೆ ಹತ್ತಿರ.

v) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು ಹೊಸ ಲೇಔಟ್‌ದಲ್ಲಿ ಆರ್. ಎಸ್. ನಂ. 1057:ಎ:

vi) ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು ಹೊಸ ಲೇಔಟ್‌ದಲ್ಲಿ ಆರ್.ಎಸ್.ನಂ. 1057:ಎ

2) ಬೀದಿ ದೀಪ ನಿರ್ವಹಣೆ

3) ಆರ್.ಎಸ್.ನಂ. 890 ಮತ್ತು 891ರಲ್ಲಿ ಉದ್ಯಾನವನ ಮತ್ತು ಆಟದ ಮೈದಾನ ಅಭಿವೃದ್ಧಿಪಡಿಸುವುದು.

4) ಆರ್.ಎಸ್.ನಂ. 1057ಎ ನೇದ್ದರಲ್ಲಿ ಸಮುದಾಯ ಭವನ ನಿರ್ಮಿಸುವುದು.

5) ಭೂಮಿ ಖರೀದಿಸಿ, ನಿವೇಶನ ಅಭಿವೃದ್ಧಿ ಪಡಿಸಿ ನಿವೇಶನಗಳನ್ನು ಹಂಚಿಕೆ ಮಾಡುವುದು.

ಆ) 1) ಇಲ್ಲ

2) ಇಲ್ಲ

3) ಈ ಕೆಳಕಂಡ ಮೂರು ವಾಣಿಜ್ಯ ಮಳಿಗೆ ಸಂಕೀರ್ಣಗಳ ನಿರ್ಮಾಣ ಕಾರ್ಯವು ವಿವಿಧ ಹಂತಗಳಲ್ಲಿವೆ.

i) ವಾಣಿಜ್ಯ ಮಳಿಗೆಗಳನ್ನು ಕಟ್ಟುವುದು ವಾರ್ಡ್ ನಂ. 7ರ ಬಾಗಲಕೋಟೆ ರಸ್ತೆ ಹುಡ್ಕೋ ಹತ್ತಿರ.

ii) ವಾಣಿಜ್ಯ ಮಳಿಗೆಗಳನ್ನು ಕಟ್ಟುವುದು ವಾರ್ಡ್ ನಂ. 7ರ ನಗರಸಭೆಯ ಧರ್ಮದ ದವಾಖಾನೆ ಹತ್ತಿರ.

iii) ವಾಣಿಜ್ಯ ಮಳಿಗೆಗಳನ್ನು ಕಟ್ಟುವುದು. ವಾರ್ಡ್ ನಂ. 1 ಆದರ್ಶ ನಗರದಲ್ಲಿ (ಹೊಸ ಹುಡ್ಕೋ)

4) ಇಲ್ಲ.

5) ಇಲ್ಲ.